# ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯದೊಡ್ಡದೋ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page no. 80.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 187.
3. **Note:** The wordings in Ref. 1 and Ref. 2 almost match with each other except few minor differences which are not considered here. The wordings given here are as per Ref. 2.
4. **Note:** This kruti is not available in the books of Pavanje Guru Rao.
5. **Note:** The singer has followed wordings in Ref. 2.

ರಾಗ ಪಂತುವರಾಳಿ ತಾಳ ಆದಿ

ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ || ಪ ||

ಸಮ್ಮತಿಂದ ನಾವು ನೀವು ಸಾಟಿ ಮಾಡಿ ನೋಡುವ ಬನ್ನಿ || ಅಪ ||

ಹೇಮ ಹೊನ್ನು ಹಣಗಳಿಗೆ ಹೇರಳ ಭಯಗಳುಂಟು
ರಾಮ ನಾಮ ದ್ರವ್ಯಕಿನ್ನು ಯಾರ ಭಯವಿಲ್ಲವಯ್ಯ || ೧ ||

ಕಡಗ ಕಂಠ ಮಾಲೆಗಳಿಗೆ ಕಳ್ಳರ ಅಂಜಿಕೆಯುಂಟು
ಅಡವಿ ತುಳಸಿ ಮಾಲೆಗಿನ್ನು ಆರ ಅಂಜಿಕಿಲ್ಲವಯ್ಯ || ೨ ||

ವ್ಯಾಪಾರ ಉದ್ಯೋಗಕಿನ್ನು ವ್ಯಾಕುಲದ ಭಯವುಂಟು
ಗೋಪಾಳದ ವೃತ್ತಿಗಿನ್ನು ಗೊಡವೆ ಯಾರದಿಲ್ಲವಯ್ಯ || ೩ ||

ಸರಕು ಬೆಲ್ಲ ತುಪ್ಪ ಧಾನ್ಯ ಸವೆದೀತೆಂಬ ಚಿಂತೆಯುಂಟು
ಹರಿ ನಾಮಾಮೃತಕೆ ಇನ್ನು ಯಾವ ಚಿಂತೆಯಿಲ್ಲವಯ್ಯ || ೪ ||

ನಿಮ್ಮ ಭಾಗ್ಯ ಲಕ್ಷ್ಮೀದೇವಿ ನಮ್ಮ ಭಾಗ್ಯ ನಾರಾಯಣನು
ನಮ್ಮ ನಿಮ್ಮ ಭಾಗ್ಯದೊಡೆಯ ಪುರಂದರ ವಿಠಲನು || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ವಿಜಯನಗರದ ಅರಸ ಕೃಷ್ಣದೇವರಾಯನು ಪುರಂದರ ದಾಸರ ವೈರಾಗ್ಯವನ್ನು ಪರೀಕ್ಷಿಸಬೇಕೆಂದು ಮನಸ್ಸು ಮಾಡಿ, ಅವರೊಂದಿಗೆ ಮಾತನಾಡುತ್ತಿರುವಾಗ ಈ ಪದ ಮೈದಳೆಯಿತೆಂದು ಪ್ರತೀತಿ.

**ಸಮ್ಮತಿಂದ** – ಪರಸ್ಪರ ಒಡಂಬಡಿಕೆಯಿಂದ.

**ಹೇಮ ಹೊನ್ನು** – ಈ ಚರಣಕ್ಕೆ ಪಾಠಾಂತರವಿದೆ.

ಹೆಣ್ಣು ಹೊನ್ನು ಮಣ್ಣುಗಳಿಗೆ ಕಣ್ಣಿಡುವರಂಜಿಕೆಯುಂಟು

ಪನ್ನಗಶಯನನ ನಾಮಕೆ ಯಾರಂಜಿಕೆ ಇಲ್ಲವೋ

**ವ್ಯಾಕುಲ** – ಲಾಭ ನಷ್ಟಗಳ ಎಣಿಕೆ.

**ಸಾಟಿಮಾಡು** = ಹೋಲಿಸು

**ಸರಕು** = ಆಹಾರ ಪದಾರ್ಥ

**Classification:** Keerthane
**Ankita:** purandara vittala
**Location:** Hampi, Karnataka State
**Category:** Hari Sarvottama, Sankeerna.
**Sub-Category:** Bhagya, bangara, dhAnya, bella, tuppa, Krishna, kalla, bhaya, kaadu, tulasi, rama, vyapara, Lakshmi, devi, dhana (rokka), amruta, Narayana
**Pravachana:** NA
**Explanation:** NA